**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ–೫೮೩ ೨೭೬**

## ಮಾರ್ಚ್ ೧೭, ೨೦೧೬ರ ಗುರುವಾರದಂದು ನಡೆದ ಕಾರ್ಯಕಾರಿ ಸಮಿತಿಯ ೧೮೩ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಡಾ. ಹನುಮಣ್ಣ ನಾಯಕ ದೊರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೩. ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೪. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೫. ಡಾ. ಪಿ. ಮಹಾದೇವಯ್ಯ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೦೬. ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

ಸಭೆಯ ಆರಂಭದಲ್ಲಿ ಮಾನ್ಯ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ವಿಶ್ವವಿದ್ಯಾಲಯದ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಚ್.ಎಂ. ಸೋಮನಾಥ ಇವರ ವರ್ತನೆ ಕುರಿತ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಿ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

೧. ಸದರಿ ಸಿಬ್ಬಂದಿಯ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಮತ್ತು ಕುಲಸಚಿವರಿಗೆ ಸಲ್ಲಿಸಿರುವ ಪತ್ರಗಳನ್ನು ಕುರಿತು ಗಂಭೀರವಾಗಿ ಚರ್ಚಿಸಿ ಕೆ.ಸಿ.ಎಸ್.ಆರ್. ನಿಯಮ ಮತ್ತು ವಿಶ್ವವಿದ್ಯಾಲಯದ ಪರಿನಿಯಮಗಳನ್ವಯ ಕ್ರಮಕೈಗೊಳ್ಳಲು ಅನುಮೋದಿಸಿತು.

೨. ಶ್ರೀ ಎಚ್.ಎಂ. ಸೋಮನಾಥ ಇವರ ಮೂಲ ಹುದ್ದೆಯ ಕುರಿತು ಈವರೆಗಿನ ಪಡೆದ ಬಡ್ತಿಗಳ ಸಂಪೂರ್ಣ ಮಾಹಿತಿಯನ್ನು ಪಡೆದು ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮೂರು ಡೀನ್‌ಗಳನ್ನು ಒಳಗೊಂಡಂತೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್)ಯ ಬಾಹ್ಯ ತಜ್ಞರನ್ನು ಸೇರಿಸಿ ಸಮಿತಿಯೊಂದನ್ನು ರಚಿಸಲು ತೀರ್ಮಾನಿಸಲಾಯಿತು. ಈ ಸಮಿತಿಯು ಬಡ್ತಿ ಮತ್ತು ನೇಮಕಾತಿಗೆ ಸಂಬಂಧಿಸಿದ ಎಲ್ಲ ದಾಖಲೆ ಹಾಗೂ ವಿವರಣೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಅಗತ್ಯ ಕ್ರಮವಹಿಸಲು ಶಿಫಾರಸ್ಸು ಮಾಡಿತು.

೩. ಈ ಸಿಬ್ಬಂದಿಯು ವಿಶ್ವವಿದ್ಯಾಲಯದ ಸೂಕ್ತ ಪ್ರಾಧಿಕಾರಗಳ ಅನುಮತಿ ಪಡೆಯದೇ ನೇರವಾಗಿ ಕುಲಾಧಿಪತಿಗಳಿಗೆ ಹಾಗೂ ಹೊರಗಿನ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಘನತೆ ಮತ್ತು ಪಾವಿತ್ರ್ಯಕ್ಕೆ ಅಪಕೀರ್ತಿ ತರುವಂತೆ ಪತ್ರಗಳನ್ನು ಬರೆದು ಸಲ್ಲಿಸಿರುವುದನ್ನು ಗಂಭೀರವಾಗಿ ಚರ್ಚಿಸಿತು. ಇದು ವಿಶ್ವವಿದ್ಯಾಲಯದ ಪರಿನಿಯಮ ೩೩(ಅ.ಆ., ಇ ಹಾಗೂ ಈ) ಮತ್ತು ೩೪ರ ಅಡಿ ಶಿಸ್ತು ಮತ್ತು ನಿಯಂತ್ರಣಕ್ಕೆ ಒಳಪಡುತ್ತದೆ. ಇದು ಶಿಕ್ಷಾರ್ಹವು ಮತ್ತು ಕಾನೂನಿನ ಉಲ್ಲಂಘನೆಯಾಗಿದೆ ಎಂದು ಸಭೆ ಭಾವಿಸಿತು.

೪. ಶ್ರೀ ಎಚ್.ಎಂ. ಸೋಮನಾಥ ಕಾರ್ಯನಿರ್ವಹಿಸುತ್ತಿರುವ ಕಚೇರಿ ದಾಖಲೆಗಳು ಹಾಗೂ ವಸ್ತುಗಳನ್ನು ಕೂಡಲೇ ಕುಲಸಚಿವರ ಸುಪರ್ದಿಗೆ ಪಡೆಯಲು ಸೂಚಿಸಿತು. ಇನ್ನು ಮುಂದೆ ಅನುಮತಿ ಇಲ್ಲದೆ ಯಾವ ದಾಖಲೆಗಳನ್ನು ಕಡತಗಳನ್ನು ನಿರ್ವಹಿಸುವಂತಿಲ್ಲ. ವಿಶ್ವವಿದ್ಯಾಲಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸದರಿ ಸಿಬ್ಬಂದಿಯನ್ನು ಈಗಿರುವ ವಿಭಾಗದಿಂದ ಸ್ಥಳ ಬದಲಾವಣೆ ಮಾಡಲು ತೀರ್ಮಾನಿಸಲಾಯಿತು.

೫. ಶ್ರೀ ಎಚ್.ಎಂ. ಸೋಮನಾಥ ಇವರು ಸಲ್ಲಿಸಿರುವ ಪತ್ರಗಳಲ್ಲಿ ಅಶ್ಲೀಲ, ಅಸಂವಿಧಾನಿಕ ಮತ್ತು ನಿಯಮಬಾಹಿರ ಪದಗಳನ್ನು ಪರಿಶೀಲಿಸಿದ ಸಮಿತಿಯು ಕುಲಸಚಿವರು ಜಾತಿ ನಿಂದನೆಯ ಪ್ರಕರಣವನ್ನು ಪೊಲೀಸ್ ಠಾಣೆಯಲ್ಲಿ ದಾಖಲಿಸುವಂತೆ ಸೂಚಿಸಿತು.

೬. ಹಾಗೆಯೇ ಮಾನ್ಯ ಕುಲಪತಿಗಳನ್ನು ಉದ್ದೇಶಿಸಿ ಬರೆದಿರುವ ಪತ್ರಗಳಲ್ಲಿಯೂ ಮಾನನಷ್ಟದ ಒಕ್ಕಣೆಗಳಿದ್ದು, ಶ್ರೀ ಎಚ್.ಎಂ. ಸೋಮನಾಥ ಇವರ ವಿರುದ್ಧ ಮಾನನಷ್ಟ ಮೊಕದ್ದಮೆಯನ್ನು ಮಾನ್ಯ ಕುಲಪತಿಗಳು ನ್ಯಾಯಾಲಯದಲ್ಲಿ ಹೂಡುವಂತೆ ಸಭೆಯು ತೀರ್ಮಾನಿಸಿತು.

೭. ಇವರ ಸೇವಾ ಪುಸ್ತಕ, ವೈಯಕ್ತಿಕ ಕಡತಗಳ ದಾಖಲೆಗಳನ್ನು ಗಮನಿಸಿ ವರದಿ ತಯಾರಿಸಿ, ಸಂಶಯಗಳಿರುವೆಡೆ ಸೂಕ್ತ ಕಾನೂನುಕ್ರಮ ಜರುಗಿಸಲು ಸಭೆ ತೀರ್ಮಾನಿಸಿತು.

| | |
|---|---|
| **ಕುಲಸಚಿವರು** | **ಕುಲಪತಿಗಳು** |
| **(ಪದನಿಮಿತ್ತ ಕಾರ್ಯದರ್ಶಿ)** | **(ಅಧ್ಯಕ್ಷರು)** |